ವರ್ಕರ್ಸ್‌ಗೆ ಅಂತಹ ಟ್ರೈನಿಂಗ್‌ಗಳನ್ನು ಮಾತ್ರ ಕೊಡಬೇಕೆನ್ನುವ ಯೋಜನೆಯನ್ನು ನಾವು ಹಮ್ಮಿಕೊಂಡಿದ್ದೇವೆ. ಅದೇ ರೀತಿ ಇವತ್ತು ಟ್ರೈನಿಂಗ್ ಕೊಡಲಾಗುತ್ತಿದೆ. ನಿಮ್ಮ ಏರಿಯಾದಲ್ಲಿ ನಾವು ಕೊಟ್ಟಿರತಕ್ಕಂಥ ಟ್ರೈನಿಂಗ್, ಪ್ರಿಂಟಿಂಗ್ ಬುಕ್ ಬೈಂಡಿಂಗ್, ಹ್ಯಾಂಡ್‌ಲೂಂ ವೀವಿಂಗ್, ಲೆದರ್‌ಬ್ಯಾಗ್ಸ್ ಬ್ಲಾಕ್‌ಸ್ಮಿತ್, ರೆಡಿಮೇಡ್ ಗಾರ್ಮೆಂಟ್ಸ್ ಇಂತಹದಕ್ಕೆಲ್ಲಾ ಕೊಟ್ಟಿದ್ದೇವೆ. ಕೆಲವರು ಸಾಲ ಅವರೇ ತೆಗೆದುಕೊಂಡಿದ್ದಾರೆ. ಮತ್ತೆ ಕೆಲವರಿಗೆ ಸಾಲ ಸಿಗದೇ ಇರಬಹುದು. ಅಂತಹವರಿಗೆ ಕೂಡ ನಾವು ಡಿ.ಐ.ಸಿ. ಮೂಲಕ ಮಾರ್ಗದರ್ಶನವನ್ನು ಕೊಡುವುದಕ್ಕೆ ಎಸ್ಕಾರ್ಟ್ ಸರ್ವೀಸ್ ಕೂಡ ಇವತ್ತು ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ಶಿವಾನಂದ : ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಂದು ಖಾಯಂ ಆಗಿ ವಿಶ್ವ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಮಾಡಬೇಕೆಂದು ಎರಡು ಸಲ ಬಂದಾಗ ಪಟ್ಟಿ ಕೊಟ್ಟಿದ್ದರು. ಒಂದೂವರೆ ವರ್ಷವಾಯಿತು, ಇದುವರೆಗೂ ಇದರ ಬಗ್ಗೆ ಏನೂ ಪ್ರಸ್ತಾವನೆ ಇಲ್ಲ. ಆದುದರಿಂದ ತಮ್ಮ ಮೂಲಕ ಏನು ಪರಿಸ್ಥಿತಿ ಇದೆ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಬಿ. ಎ. ಮೊಯ್ದೀನ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಅಲ್ಲಿ ಆಗಿರತಕ್ಕಂಥ ಕೆಲಸದ ಬಗ್ಗೆ ಮಾಹಿತಿ ಇಲ್ಲವೆಂದು ಕಾಣುತ್ತದೆ. ನಾನು ತಕ್ಷಣ ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ನೆನೆಗುದಿಗೆ ಬಿದ್ದಿರತಕ್ಕಂಥ ಒಂದು ಪ್ರಪೋಸಲ್ ಏನಿತ್ತು, ಒಂದು ಸೈಟ್ ಮತ್ತು ಶೆಡ್ ಕೊಡತಕ್ಕಂಥ ವಿಚಾರದಲ್ಲಿ, ನಾವು ಮುಫತ್ತಾಗಿ ಕೆ.ಎಸ್.ಎಸ್.ಐ.ಡಿ.ಸಿ. ಅವರ ಹೆಸರಿನಲ್ಲಿ ಒಂದು ಶೆಡ್‌ನ್ನು ಕೊಟ್ಟಿದ್ದೇವೆ. ಅದನ್ನು ಬೆಂಗಳೂರು ಯೂನಿವರ್ಸಿಟಿಯ ತಾಂತ್ರಿಕ ತಜ್ಞರು ಮತ್ತು ನಮ್ಮ ವೈಸ್ ಚಾನ್ಸಲರ್‌ನ ಅಧ್ಯಕ್ಷತೆಯಲ್ಲಿ ಇವತ್ತು ಅಲ್ಲಿ ಒಂದು ಉತ್ತಮವಾದಂತಹ ಟ್ರೈನಿಂಗ್ ಸೆಂಟರನ್ನು ಅವರ ಹೆಸರಿನಲ್ಲಿ ಮಾಡಬೇಕೆಂದು ಎಲ್ಲಾ ರಂಗಸಜ್ಜಿಕೆ ಆಗಿದೆ. ತಾವೂ ಕೂಡ ಭೇಟಿ ಕೊಡಬೇಕು. ಅಲ್ಲಿ ಏನಾಗುತ್ತಿದೆ ಎನ್ನುವುದನ್ನು ನಮಗೆ ತಾವು ತಿಳಿಸಬೇಕು. ನಾನು ಎರಡು ಸಾರಿ ಬಂದಾಗ ಕೂಡ ತಾವು ಇರಲಿಲ್ಲ. ಅಲ್ಲಿ ಏನೂ ಆಗಿಲ್ಲವೆಂದು ಹೇಳುತ್ತಿದ್ದೀರಿ. ಬಹಳಷ್ಟು ಆಗಿದೆ.

ಅಧ್ಯಕ್ಷರು : ಆಲ್‌ರೈಟ್ ಆಗಿದ್ದರೆ ಸಂತೋಷ ಅವರು ಹೋಗಿ ನೋಡಿಕೊಂಡು ಬರುತ್ತಾರೆ.

ತಡೆಹಿಡಿಯಲಾದ ಪ್ರಶ್ನೆಗಳು

ಮಾಗಡಿ ತಾಲ್ಲೂಕಿನ ನೇಕಾರರಿಗೆ ಪುನರ್‌ವಸತಿ

495 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಮಾಗಡಿ ತಾಲ್ಲೂಕಿನಲ್ಲಿರುವ ನೇಕಾರರ ಒಟ್ಟು ಸಂಖ್ಯೆ ಎಷ್ಟು? ಈ ನೌಕರರಲ್ಲಿ ಹಲವಾರು ಜನ ವಸತಿ ಸೌಕರ್ಯವಿಲ್ಲದೆ, ಸ್ವಂತ ಕಾರ್ಯಾಗಾರವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಈ ಬಡ ನೌಕರರಿಗೆ ಪುನರ್‌ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರವು ನಿರ್ಧರಿಸಿದೆಯೇ?

ಆ) ಹೀಗಿದ್ದಲ್ಲಿ ಈ ಪುನರ್‌ವಸತಿ ಕಾರ್ಯಕ್ರಮದ ರೂಪುರೇಷೆಗಳು ಏನು?

ಈ) ಈ ಕಾರ್ಯಕ್ರಮಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು) :

ಅ) 279 ಹೌದು.

ಆ) ಹೌದು.

ಇ) ಈ ಯೋಜನೆಯಂತೆ ನೇಕಾರರ ಕೈಮಗ್ಗ ಅಭಿವೃದ್ಧಿ ನಿಗಮದ ಅಥವಾ ಪ್ರಾಥಮಿಕ ನೇಕಾರರ ಸಹಕಾರ ಸಂಘದಲ್ಲಿ ಉತ್ಪಾದನೆಯಲ್ಲಿ ತೊಡಗಿರುವ ನೇಕಾರರಾಗಿರಬೇಕು ಮತ್ತು ತಮ್ಮದೇ ಹೆಸರಿನಲ್ಲಿ ಮನೆ ಕಟ್ಟಿಸಲು ಸ್ಥಳವನ್ನು ಹೊಂದಿರಬೇಕು. ಯೋಜನೆಯ ಮಾರ್ಗಸೂಚಿಯಂತೆ ಪ್ರತಿ ವಸತಿ ಹಾಗೂ ಕಾರ್ಯಗಾರಕ್ಕೆ ರೂ.14000.00 ಬೇಕಾಗಿರುವುದು, ರೂ.18000.00 ವನ್ನು ಕೇಂದ್ರ ಸರ್ಕಾರವು ಸಹಾಯಧನವಾಗಿಯೂ ಮತ್ತು ರೂ. 3000.00 ವನ್ನು ಫಲಾನುಭವಿಗಳೇ ಭರಿಸ ಬೇಕಾಗಿರುವುದು. ನೇಕಾರರಿಗೆ ವಸತಿ ಸೌಕರ್ಯವಿದ್ದು, ಪಕ್ಕದಲ್ಲಿ ಸ್ಥಳವಿದ್ದಲ್ಲಿ ಅಂತಹವರಿಗೆ ಕಾರ್ಯಾಗಾರ ಕಟ್ಟಿಸಿಕೊಡಲು ಪ್ರತಿ ಕಾರ್ಯಾಗಾರಕ್ಕೆ ಕೇಂದ್ರ ಸರ್ಕಾರವು ರೂ. 7000.00 ಮತ್ತು ರಾಜ್ಯ ಸರ್ಕಾರವು ರೂ. 2000.00 ವನ್ನು ಸಹಾಯಧನವಾಗಿಯೂ ಮತ್ತು ಫಲಾನುಭವಿಗಳು ರೂ. 2000.00 ವನ್ನು ಭರಿಸಬೇಕಾಗಿರುವುದು.

ಈ) ಅರ್ಹ ನೇಕಾರರಿಂದ ಪ್ರಸ್ತಾವನೆಗಳನ್ನು ಪಡೆದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾಗಡಿ ತಾಲ್ಲೂಕಿನಲ್ಲಿ ನೇಕಾರರ ಸಂಖ್ಯೆ ಎಷ್ಟಿದೆ ಎಂದು ಕೇಳಿದ್ದಕ್ಕೆ 279 ಎಂದು ಹೇಳಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಇದು ಯಾವ ವರ್ಷದಲ್ಲಿತೆಗೆದುಕೊಂಡ ಸಂಖ್ಯೆ ಎಂದು ತಿಳಿಸಬೇಕು. ಜೊತೆಗೆ ಅವರಿಗೆ ಕಾರ್ಯಕ್ರಮ ರೂಪುರೇಷೆಗಳನ್ನು ತಿಳಿಸಿದ್ದೀರಿ. ಮತ್ತು ಕಾರ್ಯಕ್ರಮವನ್ನು ಯಾವಾಗ ನೀವು ಕೈಗೆತ್ತಿಕೊಳ್ಳುತ್ತೀರಿ ಎಂದು ಕೇಳಿರುವುದಕ್ಕೆ ಪ್ರಸ್ತಾವನೆ ಕಳುಹಿಸಿದ್ದೇವೆ. ಇನ್ನೊಂದು ಬಾರಿ ಪ್ರಸ್ತಾವನೆ ಕಳುಹಿಸುವುದಕ್ಕೆ ತಯಾರಿದ್ದೇವೆ. ನೀವು ಈ ವರ್ಷವೇನಾದರೂ ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾಗಡಿ ಕ್ಷೇತ್ರದಲ್ಲಿ ಇರತಕ್ಕಂಥ 279 ನೇಕಾರರಲ್ಲಿ ನಮ್ಮಲ್ಲಿ ಇರತಕ್ಕಂಥಾದ್ದು 69 ಜನ, ಅವರು ಕೆಲಸಗಾರರು ಅಲ್ಲ. ಇದು ನನಗೆ ಇಲ್ಲಿ ಒದಗಿಸಿದಂತಹ ಮಾಹಿತಿ ಪ್ರಕಾರ. ಅಲ್ಲಿ ನಮ್ಮ ಯೋಜನೆ ಪ್ರಕಾರ ಮನೆಗಳನ್ನು ಕೊಡಬೇಕಾದರೆ, ನೇಕಾರರು ಕೈಮಗ್ಗ ನಿಗಮದ ನೇಕಾರರಾಗಿರಬೇಕು ಮತ್ತು ಸಂಘದ ನೇಕಾರರಾಗಿರಬೇಕು. ಅಲ್ಲಿ ಎರಡು ಇರತಕ್ಕಂಥಾದ್ದು. ಅವರು ಒಂದು ಸ್ವಂತ ಸೈಟ್ ಹೊಂದಿರಬೇಕು. ಇದ್ದಂತಹ ಜನರಿಗೆ ನಮ್ಮ

ಯೋಜನೆಯಡಿಯಲ್ಲಿ 18 ಸಾವಿರ ರೂಪಾಯಿಗಳನ್ನು ಕೇಂದ್ರದಿಂದ ಕೊಡುತ್ತೇವೆ. 15 ಸಾವಿರ ರೂಪಾಯಿ ಸಾಲದ ಮುಖಾಂತರ ಕೊಡಬೇಕು. 3 ಸಾವಿರ ಫಲಾನುಭವಿಗಳು ಭರಿಸಬೇಕು. ಈ ಯೋಜನೆ ಕೆಳಗೆ ನೀವು ಪ್ರಸ್ತಾವನೆ ಕಳುಹಿಸಿದ್ದು ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಈ ವರ್ಷವೇ ತಮಗೆ ಮಂಜೂರಾತಿ ಮಾಡಿಕೊಡುತ್ತೇನೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಬಿಕ್ಷಾಟನೆ ನಿಷೇಧ ಕುರಿತು

513 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಿಕ್ಷಾಟನೆ ನಿಷೇಧ ಕಾಯ್ದೆ ಯಾವಾಗಿನಿಂದ ಜಾರಿಗೆ ಬಂದಿದೆ?

ಆ) ಕಾಯ್ದೆ ಜಾರಿಗೆ ಬಂದ ನಂತರ ರಸ್ತೆಯಲ್ಲಿ ಈ ಬಿಕ್ಷುಕರು ಇಲ್ಲವೆ?

ಇ) ಬೆಂಗಳೂರಿನ ಶನಿಮಹಾತ್ಮ ದೇವಸ್ಥಾನ, ವಿಜಯನಗರ, ಸಜ್ಜನರಾವ್ ವೃತ್ತ, ರಾಜ್ಯದ ಇತರ ನಗರಗಳಲ್ಲಿ ಭಿಕ್ಷಟನೆ ನಡೆಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಈ) ರಾಜ್ಯದಲ್ಲಿ ಭಿಕ್ಷುಕರಿಗೆ ಮಾಡಿರುವ ಪರ್ಯಾಯ ವ್ಯವಸ್ಥೆಗಳೇನು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಭಿಕ್ಷಾಟನೆ ನಿಷೇಧ ಕಾಯಿದೆ ದಿನಾಂಕ : 6-6-1975 ರಿಂದ ಜಾರಿಗೆ ಬಂದಿದೆ.

ಆ) ಭಿಕ್ಷುಕರು ಇದ್ದಾರೆ. ಕಾಯಿದೆ ಜಾರಿಗೆ ಬಂದ ನಂತರ ಭಿಕ್ಷುಕರನ್ನು ಪೋಲೀಸರು ಸದರಿ ಕಾಯಿದೆಯಲ್ಲಿ ತಮಗೆ ದತ್ತವಾದ ಅಧಿಕಾರವನ್ನು ಉಪಯೋಗಿಸಿ ಭಿಕ್ಷುಕರನ್ನು ಬಂಧಿಸಿ ನಿರಾಶ್ರಿತರ ಪರಿಹಾರ ಕೇಂದ್ರಗಳಿಗೆ ಕಳುಹಿಸುತ್ತಾರೆ. ಆದರೂ ಕೂಡ ಕೆಲಮೊಮ್ಮೆ ರಸ್ತೆಯಲ್ಲಿ ಭಿಕ್ಷುಕರು ಇರುತ್ತಾರೆ.

ಇ) ಬಂದಿದೆ.

ಈ) ಬಂಧಿಸಿದ ಭಿಕ್ಷುಕರನ್ನು ನ್ಯಾಯಾಧೀಶರ ಬಳಿ ಹಾಜರುಪಡಿಸಿ ಅವರ ಆದೇಶದ ಅವಧಿಯವರೆಗೆ ಭಿಕ್ಷುಕರನ್ನು ಸ್ಥಳೀಯ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಇರಿಸಿಕೊಂಡು ಬಂಧನದ ಅವಧಿಯಲ್ಲಿ ಅವರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡುವ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಕೆ. ಜಯರಾಮ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಭಿಕ್ಷಾಟನೆ ನಿಷೇಧದ ಕಾಯಿದೆ ಬಗ್ಗೆ ಕೇಳಿದ್ದೇನೆ. ಈ ಭಿಕ್ಷಾಟನೆ ನಿಷೇಧ ಕಾಯಿದೆ ಇಡೀ ರಾಜ್ಯದಲ್ಲಿ ಇದೆಯೇ ಅಥವಾ ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತ ಮಾಡಿ ಕೊಂಡಿದ್ದೀರಾ? ಆ ಭಿಕ್ಷುಕರಿಗೆ ಶಿಬಿರಗಳು ಎಲ್ಲೆಲ್ಲಿ ಮಾಡಿಕೊಂಡಿದ್ದೀರಾ? ಹಾಗೂ ಈಗ ಭಿಕ್ಷಾಟನೆ ಏತಕ್ಕೋಸ್ಕರ ಮಾಡಿದೆ ಮತ್ತು ಈ ಭಿಕ್ಷಾಟನೆ ನಿಷೇಧ ಕಾಯಿದೆ ನಂತರ ಇದರ ಬಗ್ಗೆ ಏನಾದರೂ ಸಮೀಕ್ಷೆ ಮಾಡಿದ್ದೀರಾ? ನಿಜವಾಗಿ ಭಿಕ್ಷುಕರನ್ನು ಶಿಬಿರದಲ್ಲಿ